

# ಯಹೂದಿ ಮತ್ತು ಗುಜರಾತಿ


ಒಮ್ಮೆ ಗುಜರಾತಿಯೊಬ್ಬನು ಓರ್ವ ಯಹೂದಿಯ ಭಾವಿಯೊಂದನ್ನು ಖರೀದಿಸಿದ. ಮರುದಿನ ಪೇಟೆಗೆ ಹೋಗುವ ದಾರಿಯಲ್ಲಿ ಯಹೂದಿಯನ್ನು ಬೇಟಿಯಾದ.

ಯಹೂದಿ, 'ನಾನು ನಿನಗೆ ಭಾವಿಯನ್ನು ಮಾತ್ರ ಮಾರಿದೆ; ಅದರಲ್ಲಿರುವ ನೀರನ್ನಲ್ಲ! ಆದ್ದರಿಂದ ನೀರಿಗೆ ಬೇರೆ ಬೆಲೆ ಕೊಡಬೇಕು' ಎಂದ.

ಗುಜರಾತಿ ಏನೂ ಕಡಿಮೆ ಅಲ್ಲ! ಅವನು ಹೇಳಿದ : 'ನೀನು ಹೇಳುವುದು ಸರಿಯೇ. ನಾನು ಬಾವಿ ಮಾತ್ರ ಕೊಂಡು ಕೊಂಡೆ. ಅದರಲ್ಲಿರುವ ನೀರನ್ನು ತೆಗೆದು ಬಾವಿಯನ್ನು ಖಾಲಿ ಮಾಡಿ ಕೊಡು! ಇಲ್ಲದಿದ್ದರೆ ನಿನ್ನ ನೀರನ್ನು ನನ್ನ ಬಾವಿಯಲ್ಲಿ ಇಡುವುದಕ್ಕೆ ಬಾಡಿಗೆ ಕೊಡಬೇಕಾಗುತ್ತೆ.

***

ವಿಜಯ





# ಯಾರು ದೊಡ್ಡ ಮುಠ್ಠಾಳ?

ಒಬ್ಬ ಭಿಕ್ಷುಕನಿಗೆ ಬೆಲೆ ಬಾಳುವ ವಜ್ರವೊಂದು ದಾರಿಯಲ್ಲಿ ಸಿಕ್ಕಿತು. ಅದರ ಬೆಲೆ ಅವನಿಗೆ ಗೊತ್ತಿರಲಿಲ್ಲ; ಅವನು ಅದನ್ನು ತನ್ನ ಕತ್ತೆಯ ಕೊರಳಿಗೆ ಹಾಕಿದ್ದ. ಇದನ್ನು ನೋಡುತ್ತಿದ್ದ ಒಬ್ಬ ವಜ್ರದ ವ್ಯಾಪಾರಿ ಅವನಲ್ಲಿಗೆ ಹೋಗಿ, 'ಈ ಕಲ್ಲನ್ನು ನಾನು ಕೊಳ್ಳುತ್ತೇನೆ! ನಿನಗೆ ಎಷ್ಟು ಹಣ ಬೇಕು?' ಎಂದು ಕೇಳಿದ.

ಭಿಕ್ಷುಕ, 'ಒಂದು ರೂಪಾಯಿ ಕೊಟ್ಟರೆ ಇದನ್ನ ಕೊಡುತ್ತೇನೆ' ಎಂದ.

ವ್ಯಾಪಾರಿಗೆ ಅತಿ ಆಸೆ! ಅವನು, 'ಒಂದು ರೂಪಾಯಿ ತುಂಬಾ ಹೆಚ್ಚಾಯಿತು. ಅರ್ಧ ರೂಪಾಯಿಗೆ ಕೊಡು' ಎಂದು ಚೌಕಾಸಿ ಮಾಡಿದ.

ಭಿಕ್ಷುಕ, 'ಇದು ಕತ್ತೆಯ ಕತ್ತಿನಲ್ಲೇ ಇರಲಿ' ಎಂದು ಹೇಳಿ ಮುಂದೆ ನಡೆದ. ಕೊಡದೆ ಎಲ್ಲಿ ಹೋಗುತ್ತಾನೆ ಎಂದು ಕೊಂಡು ವ್ಯಾಪಾರಿ ಕಾದಿದ್ದ. ಅಷ್ಟರಲ್ಲಿ ಅಲ್ಲಿಗೆ ಬಂದ ಇನ್ನೊಬ್ಬ ವ್ಯಾಪಾರಿ ಆ ಕಲ್ಲನ್ನು ಒಂದು ಸಾವಿರ ರೂಪಾಯಿಗಳಿಗೆ ಕೊಂಡು ಕೊಂಡ. ಭಿಕ್ಷುಕನ ಖುಷಿಗೆ ಪಾರವೇ ಇಲ್ಲ!

ಇದನ್ನು ಎದುರು ನೋಡದ ಮೊದಲನೇ ವ್ಯಾಪಾರಿ ಭಿಕ್ಷುಕನನ್ನ ಕುರಿತು, 'ನೀನು ಶತ ಮೂರ್ಖ! ಒಂದು ಕೋಟಿ ಬೆಲೆ ಬಾಳುವ ವಜ್ರವನ್ನು ಕೇವಲ ಒಂದು ಸಾವಿರಕ್ಕೆ ಕೊಟ್ಟೆ; ಅಷ್ಟೇ ಅಲ್ಲ ಸಂತೋಷ ಪಡುತ್ತಿಯಲ್ಲಾ? ಚೆನ್ನಾಗಿ ಮೋಸ ಹೋದೆ' ಎಂದು ಟೀಕಿಸಿದ.

ಭಿಕ್ಷುಕ ಬಿದ್ದು ಬಿದ್ದು ನಗುತ್ತ, 'ಯಾರು ಹೆಚ್ಚು ದಡ್ಡ? ನನಗೆ ಅದರ ಬೆಲೆ ಗೊತ್ತಿಲ್ಲ; ಹಾಗಾಗಿ ಆ ಬೆಲೆಗೆ ಕೊಟ್ಟು ಬಿಟ್ಟೆ; ಅಲ್ಲದೆ ನನಗೆ ಸಾವಿರ ದೊಡ್ಡ ಮೊತ್ತ. ಅದಕ್ಕೆ ಖುಷಿಯಾದೆ! ಆದರೆ ನೀನು? ಅದರ ಬೆಲೆ ಗೊತ್ತಿದ್ದೂ ಕೇವಲ ಐವತ್ತು ಪೈಸೆಗಾಗಿ ಅದನ್ನ ಕಳೆದುಕೊಂಡೆ! ಅದು ಎಷ್ಟು ದೊಡ್ಡ ಅವಿವೇಕ' ಎನ್ನುತ್ತ ನಡೆದ.

ನಾವೂ ಹೀಗೇ ನಮ್ಮ ಜೀವನದಲ್ಲಿ ಅಲ್ಪ ವಿಷಯಕ್ಕಾಗಿ ಅಪೂರ್ವವಾದದ್ದನ್ನೇ ಕಳೆದು ಕೊಳ್ಳುತ್ತೇವೆ.

■ ಕೆ. ನಿರುಪಮಾ, ಬೆಂಗಳೂರು